"JULY 2025 Makeup SEE"

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್ (1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
Email:dte.commissioner@gmail.com
ದಿನಾಂಕ: 10.06.2025

**ಜ್ಞಾಪನ**

ವಿಷಯ: 2020-21ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ರ ಪಠ್ಯಕ್ರಮದಲ್ಲಿ ಪ್ರವೇಶ ಪಡೆದು 1 ರಿಂದ 6ನೇ ಸೆಮಿಸ್ಟರ್‌ಗಳಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳು ಜುಲೈ 2025 Makeup (SEE) ಪರೀಕ್ಷೆಗೆ ನೋಂದಾಯಿಸುವ ದಿನಾಂಕ ವಿಸ್ತರಿಸುವ ಬಗ್ಗೆ.

ಉಲ್ಲೇಖ: 1)ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:06.06.2025
2)ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:30.05.2025

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಸುತ್ತೋಲೆಯನ್ವಯ 1 ರಿಂದ 6ನೇ ಸೆಮಿಸ್ಟರ್‌ಗಳ ವಿವಿಧ ಥಿಯರಿ ಹಾಗೂ ಪ್ರಾಯೋಗಿಕ ಕೋರ್ಸ್ (Subjects) ಗಳಲ್ಲಿ ಅನುತ್ತೀರ್ಣಗೊಂಡಿರುವ & ಸಿ-20 ಪಠ್ಯಕ್ರಮದ 2020-21, 2021-22, 2022-23, 2023-24 ಹಾಗೂ 2024-25ನೇ ಶೈಕ್ಷಣಿಕ ಸಾಲುಗಳಲ್ಲಿ ಶೇಕಡಾ 40 ಕ್ಕಿಂತ ಕಡಿಮೆ CIE ಅಂಕಗಳನ್ನು ಪಡೆದ Not Eligible ಆಗಿದ್ದೂ, ಉಲ್ಲೇಖ (2) ರ ಸುತ್ತೋಲೆಯನ್ವಯ ಜೂನ್ 2025 Makeup CIE ಮತ್ತು ಜುಲೈ 2025 Makeup (SEE) ಪರೀಕ್ಷೆಗೆ ನೋಂದಾಯಿಸುವ ವಿದ್ಯಾರ್ಥಿಗಳಿಂದ ನಿಗದಿತ **"JULY 2025 Makeup SEE"** ಅರ್ಜಿ ನಮೂನೆಯೊಂದಿಗೆ ಪರೀಕ್ಷಾ ಶುಲ್ಕವನ್ನು ದಿನಾಂಕ:10.06.2025 ರವರೆಗೆ ಪಡೆಯಲು ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿತ್ತು. ಮುಂದುವರೆದು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಪರೀಕ್ಷಾ ಶುಲ್ಕ ಪಾವತಿ ಅವಧಿಯನ್ನು **ದಿನಾಂಕ:16.06.2025 ರವರೆಗೆ** ವಿಸ್ತರಿಸಲಾಗಿದ್ದು, ಸಂಬಂಧಿಸಿದ ಸಂಸ್ಥೆಗಳ ಪ್ರಿನ್ಸಿಪಾಲರುಗಳು ಕೆಳಕಂಡಂತೆ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆಯಲು ಸೂಚಿಸಲಾಗಿದೆ.

1. ಪ್ರತಿ ಸೆಮಿಸ್ಟರ್‌ನ ಒಂದು ವಿಷಯಕ್ಕೆ ರೂ.200+ರೂ.50 ಅಂಕಪಟ್ಟಿ ಶುಲ್ಕ
2. ಪ್ರತಿ ಸೆಮಿಸ್ಟರ್‌ನ ಎರಡು ವಿಷಯಗಳಿಗೆ ರೂ.200+ರೂ.50 ಅಂಕಪಟ್ಟಿ ಶುಲ್ಕ
3. ಪ್ರತಿ ಸೆಮಿಸ್ಟರ್‌ನ ಮೂರು/ ಹೆಚ್ಚು ವಿಷಯಗಳಿಗೆ ರೂ.300+ರೂ.50 ಅಂಕಪಟ್ಟಿ ಶುಲ್ಕ

ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳು ಪ್ರತಿ ವಿದ್ಯಾರ್ಥಿಯು ಪರೀಕ್ಷಾ ಶುಲ್ಕವನ್ನು K2 ಮುಖಾಂತರ ಸರ್ಕಾರಿ ಖಜಾನೆಗೆ ಲೆಕ್ಕ ಶೀರ್ಷಿಕೆ (0202-02-101-0-01) ಗೆ ಜಮಾ ಮಾಡುವ ಬಗ್ಗೆ ನಿಗಾವಹಿಸಿ ಕ್ರಮಕೈಗೊಳ್ಳುವುದು.

ಉಲ್ಲೇಖ (2)ರ ಸುತ್ತೋಲೆಯನ್ವಯ **ಈಗಾಗಲೇ ಜೂನ್ 2025 Makeup ಕಿರುಪರೀಕ್ಷೆ (CIE) ಗಳಿಗೆ ನೋಂದಾಯಿಸುವ ವಿದ್ಯಾರ್ಥಿಗಳು, ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳಲ್ಲಿ 1 ರಿಂದ 6ನೇ ಸೆಮಿಸ್ಟರ್ ಗಳ ವಿವಿಧ ಥಿಯರಿ ಹಾಗು ಪ್ರಾಯೋಗಿಕ ಕೋರ್ಸ್ (Subjects) ಗಳಲ್ಲಿ ಅನುತ್ತೀರ್ಣಗೊಂಡಿರುವ ವಿಷಯಗಳಿಗೆ ಜುಲೈ2025ರ Makeup SEE ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಸಂಬಂಧಪಟ್ಟ ಸೆಮಿಸ್ಟರ್ ನ ಪರೀಕ್ಷಾ ಶುಲ್ಕ ವ್ಯತ್ಯಾಸದ ಮೊತ್ತವನ್ನು ಸರಿದೂಗಿಸಿ ಕಡ್ಡಾಯವಾಗಿ ದಿನಾಂಕ:16.06.2025 ರೊಳಗೆ ಪಾವತಿಸಬೇಕಾಗಿರುತ್ತದೆ.**

ಕಾರ್ಯದರ್ಶಿ

ಇವರಿಗೆ,
ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ

ಪ್ರತಿ:
1. ಆಯುಕ್ತರ ಆಪ್ತಶಾಖೆ – ಅವಗಾಹನೆಗಾಗಿ
2. ನಿರ್ದೇಶಕರ ಆಪ್ತಶಾಖೆ – ಅವಗಾಹನೆಗಾಗಿ
3. ಕಾರ್ಯದರ್ಶಿಗಳ ಆಪ್ತಶಾಖೆ
4. ಉಪ ನಿರ್ದೇಶಕರು (ಪರೀಕ್ಷೆ)
5. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
6. ಇಸಿಎಸ್/ಇಎಫ್ ಎಸ್/ಇಆರ್‌ಎಸ್ ಮುಂದಿನ ಕ್ರಮಕ್ಕಾಗಿ
7. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
8. ರಿಜಿಸ್ಟ್ರಾರ್ (ಪರೀಕ್ಷೆ)
9. ಅಧೀಕ್ಷಕರು (ಆರ್‌ಡಿಎಂ (1) ರಿಂದ (15))
10. ಗಣಕ ಕೇಂದ್ರ -ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
11. ಕಛೇರಿ ಪ್ರತಿ